ಪಟ್ಟಿಯನ್ನು ಕೊಡುವುದು ದುಡ್ಡು ಎಲ್ಲಿದೆ? ನಾವು ಪಟ್ಟಿ ಕೊಟ್ಟಿದ್ದು ದುಡ್ಡು ಬರುತ್ತದೆ, ದುರಸ್ತಿ ಕೆಲಸ ಮಾಡಿ ಎಂದು ಹೇಳಿದರೆ advance ಆಗಿ ಹೇಳಿದ್ದೇವೆ. ತಾವು ಈ ಸಂಬಂಧ ದುಡ್ಡು ಎಲ್ಲಿದೆ? ದುಡ್ಡನ್ನು ಕೊಡುತ್ತೋರೋ ಅಥವಾ ಇಲ್ಲವೋ ಏನು ಸಮಾಚಾರ ಎಂದು ಕೇಳುತ್ತಿದ್ದೇನೆ.

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):–** ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ವೈ.ಎಸ್.ವಿ. ದತ್ತಾ:–** ಅದಕ್ಕಿಂತ ಮುಂಚೆ ಒಂದು ಮಾಹಿತಿ ಇದೆ. ಬಹಳ ಗಂಭೀರವಾಗಿದೆ ದುಡ್ಡಿಲ್ಲ, ಆಯಾಯ DDPI ಗಳು ಮೇಷ್ಟ್ರುಗಳಿಂದ ದುಡ್ಡನ್ನು collect ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:–** ಅದು ಏನು ಇಲ್ಲ. ಈ ಸಂಬಂಧ ದುಡ್ಡು ಬಂದಿರುವುದಿಲ್ಲ.

**ಅಧ್ಯಕ್ಷರು:–** ಮಾನ್ಯ ಕಾನೂನು ಸಚಿವರೆ, ಸಂಬಂಧಪಟ್ಟ ಮಂತ್ರಿಗಳಿಂದ ಒಂದು ಹೇಳಿಕೆಯನ್ನು ಕೊಡಿಸಿ.

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):–** ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸಿಕೊಡುತ್ತೇನೆ.

**ಅಧ್ಯಕ್ಷರು:–** O.K.

**11. ವಿಷಯ: ನೀರು ಪೂರೈಸಿ ಜಲಾಂಶವನ್ನು ಹೆಚ್ಚಿಸುವ ಬಗ್ಗೆ.**

**ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):–** ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಸಾಸುವೆಹಳ್ಳಿ project 2013–14ನೇ ಸಾಲಿನಲ್ಲಿ ಕುಡಿಯುವ ನೀರಿಗೆ

ಮತ್ತು ಕೆರೆ ತುಂಬಿಸುವುದಕ್ಕೆ ಮಂಜೂರಾತಿಯನ್ನು ಕೊಟ್ಟಿದೆ. ಆದರೆ ಮಾಯಕೊಂಡ 1 ಮತ್ತು 2, ಉಚ್ಚನಹಳ್ಳಿ, ನೆಲಕುಂದ, ಕ್ಯಾತನಹಳ್ಳಿ, ಬಾವಿಹಾಳು, ಅಣ್ಣಾಪುರ, ಕೊಡಗನೂರು, ದಿಂಡದಹಳ್ಳಿ, ಪರಶುರಾಮಪುರ, ವಿಠಲಾಪುರ, ವಂಟಿಹಾಳು, ತೊರಣಸಿ ಈ ಗ್ರಾಮದ ಕೆರೆಗಳಿಗೆ ಪೈಪ್ ಲೈನ್ ಮೂಲಕ 8 ಕಿ.ಮೀ. ಅಂತರದಲ್ಲಿದೆ. ನನ್ನಿಂದ 35 ಕಿ.ಮಿ. ಪೈಪ್‌ಲೈನ್ ಹಾಕಿಕೊಟ್ಟಿದ್ದಾರೆ. ನನ್ನ ಕ್ಷೇತ್ರವನ್ನು ಬಿಟ್ಟಿದ್ದಾರೆ. ಅದಕ್ಕೋಸ್ಕರ ನಾನು ಭಾರಿ ನೀರಾವರಿ ಸಚಿವರು water allocation ಮಾಡಿಕೊಡಬೇಕೆಂದು ಮತ್ತು ಈ ಬಗ್ಗೆ ಅನುಮತಿಯನ್ನು ಸಹ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೆರೆಗಳಿಗೆ ನೀರು ತುಂಬಿಸುವುದಕ್ಕೆ ಮತ್ತು ಕುಡಿಯುವ ನೀರಿಗಾಗಿ ಕೇಳುತ್ತಿದ್ದೇನೆ. ಇದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಿಗೆ ಬರುತ್ತಿದೆ. ತುಂಗಾಭದ್ರಾ ನದಿ ನೀರಿನ ನನ್ನ ಕ್ಷೇತ್ರವು ಬಯಲು ಸೀಮೆಯಾಗಿದೆ. ಕುಡಿಯುವ ನೀರಿಗೆ ಮತ್ತು ರೈತರಿಗೆ ಸಂಬಂಧಿಸಿದಂತೆ ಜಲಾಂಶವನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಇದನ್ನು ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):–** ಮಾನ್ಯ ಅಧ್ಯಕ್ಷರೆ, ಇದು ಕುಡಿಯುವ ನೀರಿನ ವಿಚಾರ ಆಗಿರುವುದರಿಂದ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸಬೇಕಾಗುತ್ತದೆ.

**ಅಧ್ಯಕ್ಷರು:–** ಮಾನ್ಯ ಸಚಿವರಿಂದ ಒಂದು statement ಕೊಡಿಸಿ.

**12. ವಿಷಯ: ಕುಡಿಯುವ ನೀರಿನ ಸಂಬಂಧಿಸಿದಂತೆ.**

**ಶ್ರೀ ವೈ.ಎಸ್.ವಿ. ದತ್ತಾ (ಕಡೂರು):–** ಮಾನ್ಯ ಸಭಾಧ್ಯಕ್ಷರೆ, 2009ರಲ್ಲಿ ನಮ್ಮ ಕಡೂರು ಮತ್ತು ಬೀರೂರು ಪಟ್ಟಣಕ್ಕೆ ಭದ್ರಾ ಕುಡಿಯುವ ನೀರಿನ ಯೋಜನೆ ಬಂತು. ಇದಕ್ಕಾಗಿ ಸುಮಾರು 36 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಇತ್ತು. ಈಗ ನಾವು 2015ಕ್ಕೆ ಬಂದಿದ್ದೇವೆ. ಅಂದಾಜು ವೆಚ್ಚ 36 ಕೋಟಿ ರೂಪಾಯಿಗಳೂ ಇದ್ದದ್ದು 45 ಕೋಟಿ ರೂಪಾಯಿಗಳಾಗಿ ಈಗ 49 ಕೋಟಿ ರೂಪಾಯಿಗಳಿಗೆ ತಲುಪಿದೆ. ಇದುವರೆಗೂ ಕುಡಿಯುವ ನೀರಿನ ಕೆಲಸ ಆಗಿರುವುದಿಲ್ಲ. ಪೈಪ್‌ಗಳೆಲ್ಲವೂ ಒಡೆದುಕೊಂಡು ಹೋಗಿದೆ. ಆಳವಾಗಿ ತೋಡಿರುವುದಿಲ್ಲ. ಇಲ್ಲಿ ಅಕ್ರಮ ಮತ್ತು ಅವ್ಯವಹಾರಗಳು ಆಗಿವೆ. ಕಳಪೆ ಕಾಮಗಾರಿ ಕೆಲಸ ಆಗಿದೆ. ಕಳಪೆ ಸಾಮಗ್ರಿಗಳು ವಿತರಣೆಯಾಗಿದೆ. ಸಂಬಂಧಪಟ್ಟವರು ಯಾವ ಅಧಿಕಾರಿಗಳು ಇದ್ದಾರೋ, ಯಾರು ಜನಪ್ರತಿನಿಧಿಗಳೂ ಇದ್ದಾರೋ, ಇದಕ್ಕೆ ಕಾರಣಕರ್ತರು ಯಾರು? ಇಷ್ಟು ಹಣವು waste ಆಗಿದೆ. 36 ಕೋಟಿ ರೂಪಾಯಿಗಳಿದ್ದದ್ದು 49 ಕೋಟಿ ರೂಪಾಯಿಗಳಿಗೆ ತಲುಪಿದೆ. ಇದುವರೆಗೂ ಕಡೂರು ಟೌನ್‌ಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗುತ್ತಿಲ್ಲ. ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಈ ಹಣವನ್ನು ಹೊಡೆದುಕೊಂಡು ಹೋಗಿದ್ದಾರೆ, ಕಳಪೆ ಪೈಪ್ ಹಾಕಿದ್ದಾರೆಯೇ ಈ ಪೈಪ್ ಹಾಕುವುದಕ್ಕೆ approval ಇತ್ತಾ, ಈ ಬಗ್ಗೆ ಸಮಗ್ರ ತನಿಖೆಯಾಗಬೇಕೆಂಬ ಬಗ್ಗೆ ನನ್ನ ಒತ್ತಾಯವಿದೆ. ಬೇಗ ಕುಡಿಯುವ ನೀರನ್ನು ಒದಗಿಸಿಕೊಡಬೇಕು. ತಪ್ಪು ಮಾಡಿರುವವರಿಗೆ ಶಿಕ್ಷೆಯಾಗಬೇಕು ಮತ್ತು ನೀರು ಒದಗಿಸಿಕೊಡಬೇಕು.